INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -5, January-February, 2022,
PageNo,15-20
Peer Reviewed Journal, Referred Journal

# ಮೈಸೂರು ಭಾಗದ ಕೋಟೆ ಕೊತ್ತಲಗಳು: ಒಂದು ಅವಲೋಕನ

ರಮೇಶ.[1]
ಡಾ.ಎಂ.ವಿ.ರಮೇಶ್[2]

ಪ್ರಾಗಿತಿಹಾಸ ಕಾಲದ ಜನಸಂಸ್ಕೃತಿಯನ್ನು ಗಮನಿಸಿದರೆ; ಹಲವು ಪ್ರಮುಖ ಅಂಶಗಳು ತಿಳಿದುಬರುತ್ತದೆ. ಅಂದಿನ ಕಾಲಕ್ಕೆ ಮಾನವನು ಬೇಟೆಯಾಡುತ್ತಾ ಆಹಾರ ಸಂಗ್ರಹಿಸುತ್ತಾ ಜೀವನ ನಡೆಸುತ್ತಿದ್ದನು. ಅವನು ನಿರಂತರವಾಗಿ ಪ್ರಕೃತಿಯೊಡನೆ ಸೆಣೆಸಬೇಕಾಗಿತ್ತು. ಮಳೆ, ಗುಡುಗು, ಸಿಡಿಲು, ಕಾಡ್ಗಿಚ್ಚು ನಿಸರ್ಗದಲ್ಲಿ ನಡೆಯುವ ಇಂತಹ ಘಟನೆಗಳು ಆತನಲ್ಲಿ ಭಯ ಹುಟ್ಟಿಸಿದವು. ಇವುಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ದೊಡ್ಡ ದೊಡ್ಡ ಬಂಡೆಗಳ ಆಶ್ರಯದಲ್ಲಿ ವಾಸಿಸಿದರು ಎಂಬುದು ತಿಳಿದುಬಂದಿದೆ.[1] ಆತನು ಸುಭದ್ರವಾಗಿ ಇರಬೇಕೆಂದರೆ ಬೃಹತ್ ಬಂಡೆಗಳ ಸಮೂಹಗಳ ಮಧ್ಯದಲ್ಲಿ ಎಂದು ಅರಿತರು. ಹೀಗೆ; ಮೊದಲಿಗೆ ರಕ್ಷಣೆಯ ಪರಿಕಲ್ಪನೆಯನ್ನು ಕಲಿತುಕೊಂಡನು ಎಂಬುದು ಇತಿಹಾಸ ದಾಖಲೆಗಳಿಂದ ತಿಳಿದುಬರುತ್ತದೆ. ಕ್ರಿ.ಪೂ.3ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ ಅಧಿಕಾರ ಹೊಂದಿದ್ದ ಮೌರ್ಯರು ದಕ್ಷಿಣ ಭಾರತದ ಕೆಲವು ಪ್ರದೇಶಗಳ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು. ಉದಾಹರಣೆಗೆ ಬ್ರಹ್ಮಗಿರಿ, ಚಂದ್ರವಳ್ಳಿಯ ಸನ್ನತಿ ಉತ್ಖನನದಲ್ಲಿ ಕೆಲವು ಕಟ್ಟಡದ ಅವಶೇಷಗಳು ದೊರೆತಿದ್ದರೂ ಇನ್ನೂ ಹೆಚ್ಚಿನ ಅಧ್ಯಯನಗಳು ನಡೆಯಬೇಕಾಗಿದೆ.

ಮೌರ್ಯರ ಅನಂತರ ಅಧಿಕಾರಕ್ಕೆ ಬಂದ ಶಾತವಾಹನರು ಸಹ ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ಕರ್ನಾಟಕದ ಬಹುಭಾಗವನ್ನು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ತೆಗೆದುಕೊಂಡಿದ್ದರು. ಈ ಅವಧಿಯಲ್ಲಿ ಅವರು ಕರ್ನಾಟಕದ ಸನ್ನತಿ ಮತ್ತು ಬನವಾಸಿಗಳಲ್ಲಿ ಕೋಟೆ ಕಟ್ಟಿಕೊಂಡರು ಎಂಬುದು ತಿಳಿದುಬಂದಿದೆ. ತಲಕಾಡಿನಲ್ಲಿ ಗಂಗರ ಕಾಲದ ಕೋಟೆಗಳು ಪತ್ತೆಯಾಗಿವೆ.[2] ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಹೊಯ್ಸಳರು ಹಳೇಬೀಡಿನಲ್ಲಿ ಕೋಟೆ ಕಟ್ಟಿಸಿದ್ದಾರೆ.[3]

---

1. **ಸಂಶೋಧಕರು**, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

2 .**ಸಹಾಯಕ ಪ್ರಾಧ್ಯಾಪಕರು**, ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

ವಿಜಯನಗರ ಅವನತಿಯ ಅನಂತರ ಅನೇಕ ಸಣ್ಣಪುಟ್ಟ ಪಳೆಯಪಟ್ಟುಗಳು ಸ್ವತಂತ್ರ ಆಳ್ವಿಕೆಯನ್ನು ಆರಂಭಿಸಿದವು. ಅವುಗಳಲ್ಲಿ ಮೈಸೂರು ಅರಸರು ಸಹ ಒಬ್ಬರಾಗಿದ್ದಾರೆ. ಇವರು ಸಹ ತಮ್ಮ ರಾಜ್ಯಗಳ ರಕ್ಷಣೆಗಾಗಿ ಚಿಕ್ಕಪುಟ್ಟ ಕೋಟೆಗಳನ್ನು ನಿರ್ಮಿಸಿಕೊಂಡಿದ್ದನ್ನು ನಾವು ಕಾಣುತ್ತೇವೆ. ತದನಂತರ ಹೈದರಾಲಿ, ಟಿಪ್ಪುಸುಲ್ತಾನ್ ಹಾಗೂ ಬ್ರಿಟಿಷರು ಸಹ ಇಲ್ಲಿ ಕೋಟೆಗಳನ್ನು ದುರಸ್ತಿ ಮಾಡಿರುವುದನ್ನು ಗಮನಿಸಬಹುದಾಗಿದೆ.

ಇತಿಹಾಸವೆಂದರೆ; ರಾಜಕೀಯ ಇತಿಹಾಸ. ಅದರಲ್ಲಿಯೂ ಗಣ್ಯರಾಜ ಮನೆತನಗಳ ಇತಿಹಾಸವೆಂಬ ದೃಷ್ಟಿಕೋನ ಬೆಳೆದು ಅಗಣ್ಯ ರಾಜ ಮನೆತನಗಳು ಅಲಕ್ಷ್ಯಕ್ಕೆ ಗುರಿಯಾಗುತ್ತಾ ಬಂದಿದೆ. ಇಂದಿನದು ರಾಜಸತ್ತಾ ಯುಗವಲ್ಲ ಪ್ರಜಾಸತ್ತಾಯುಗ. ಹೀಗಾಗಿ ಇಂದು ನಮ್ಮ ಇತಿಹಾಸದ ಅಧ್ಯಯನ ರಾಜರಿಂದ ಪ್ರಜೆಗಳತ್ತ ಸರಿಯುತ್ತದೆ. ಶಿಷ್ಟ ಸಾಹಿತ್ಯದೊಂದಿಗೆ ಜನಪದ ಸಾಹಿತ್ಯದ ಹರಿದ ಅಧ್ಯಯನವೇ ಇದಕ್ಕೆ ಸಾಕ್ಷಿಯಾಗಿದೆ. ಸಾಮ್ರಾಟರ ಅಧ್ಯಯನದ ಜೊತೆಗೆ ಸಾಮಂತರ ಅಧ್ಯಯನ ಪ್ರಜೆಗಳ ಅಧ್ಯಯನಗಳ ಕಡೆಗೆ ಇಂದು ಅಭ್ಯಾಸಿಗಳು ಗಮನಹರಿಸುತ್ತಲಿರುವುದು ಪ್ರಾಚೀನ ಪರಂಪರೆಯ ಸಮಗ್ರ ಚಿತ್ರಣವನ್ನು ನೀಡುವಲ್ಲಿ ಸಫಲತೆ ಕಾಣುತ್ತದೆ. ಹೊಸ ರೀತಿಯ ರಕ್ಷಣಾ ವ್ಯವಸ್ಥೆಯಿಂದಾಗಿ ಗಣ್ಯ ಮತ್ತು ರಾಜಮನೆತನಗಳೆರಡು ನಿರ್ಮಿಸಿದ್ದ ಪ್ರಾಚೀನ ಕೋಟೆಗಳು ಇಂದು ಕಾಣುತ್ತೇವೆ. ಮೈಸೂರಿನಲ್ಲಿ ಕೆಲವೊಂದು ಕೋಟೆಗಳು ನಾಶವಾಗಿವೆ. ಈಗ ಉಳಿದಿರುವ ಕೋಟೆಗಳು ನಾಶವಾಗುವ ಮುನ್ನ ಈ ವಿಶಿಷ್ಟ ವಾಸ್ತುಗಳನ್ನು ಅಕ್ಷರಗಳಲ್ಲಿ ಛಾಯಾಚಿತ್ರಗಳಲ್ಲಿ ಹಿಡಿದಿಡುವುದು ತುಂಬಾ ಅವಶ್ಯಕವಾಗಿದೆ.

ಕೋಟೆಗಳ ಚರಿತ್ರೆಯಾಗಲಿ ಅಥವಾ ಒಂದು ಅರಸು ಮನೆತನದ ಚರಿತ್ರೆಯನ್ನು ಅದನ್ನರಿಯಲು ಸಾಧನ ಸಾಮಾಗ್ರಿಗಳ ಮೊರೆ ಹೋಗಬೇಕಾದುದು ಅನಿವಾರ್ಯ. ಹೀಗಾಗಿ ಚರಿತ್ರೆಯ ರಚನೆಗೆ ಸಂಬಂಧಪಟ್ಟ ಆಧಾರಗಳನ್ನು ಪ್ರಾಕ್ತನ ಹಾಗೂ ಸಾಹಿತ್ಯವೆಂಬೆರಡು ವಿಭಾಗಗಳಲ್ಲಿ ವಿಭಾಗಿಸಿ ನೋಡಲಾಗುತ್ತದೆ. ಪ್ರಾಕ್ತನ ಆಧಾರಗಳಲ್ಲಿ ಶಾಸನ, ನಾಣ್ಯ, ಭೂ ಉತ್ಖನನ ಹಾಗೂ ಸ್ಮಾರಕಗಳು ಸೇರ್ಪಡೆಯಾದರೆ, ಸಾಹಿತ್ಯದಲ್ಲಿ ದೇಶೀಯ ವಿದೇಶೀಯವೆಂಬೆರಡು ವಿಭಾಗಗಳಿದ್ದು, ಇವು ದೇಶೀಯ ಹಾಗೂ ವಿದೇಶೀಯ ಬರಹಗಾರರ ಬರವಣಿಗೆಗಳನ್ನು ಹೊಂದಿರುತ್ತದೆ. ಶಾಸನಗಳನ್ನು ನಿಖರವಾದ ದಾಖಲೆ ಎಂದು ತಿಳಿದು ಅವುಗಳ ಆಧಾರದಿಂದ ರಚಿಸಲಾಗಿದೆ. ಇತಿಹಾಸ ಪುನಃರಚನೆಯಲ್ಲಿ ಶಾಸನಗಳು ವಹಿಸಿದ ಮತ್ತು ವಹಿಸುತ್ತಿರುವ ಪಾತ್ರ ತುಂಬ ಮಹತ್ವದ್ದು. ಆದ್ದರಿಂದಲೇ ನಮ್ಮ ನಾಡಿನ ಇತಿಹಾಸದ ರಚನಾ ಸ್ವರೂಪಕ್ಕೆ ಶಾಸನ ಸಾಮಾಗ್ರಿಯೇ ಜೀವನಾಡಿಯಾಗಿದೆ. ಅವು ಪ್ರಾಚೀನ ಮತ್ತು ಮಧ್ಯಕಾಲೀನ ಜನರ ಬದುಕಿನ ಸಮಸ್ತ ಸಂವೇದನೆಗಳ ಪ್ರಾಮಾಣಿಕ ಧ್ವನಿಗಳಾದುದರಿಂದ ನಮ್ಮ ನಾಡಿನ ಜನಜೀವನವು ಶಾಸನಗಳಲ್ಲಿ ಅಭಿವ್ಯಕ್ತಗೊಂಡಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತಗೊಂಡಿಲ್ಲ. ಅಂತೆಯೇ ಶಾಸನಗಳು ಐತಿಹಾಸಿಕ ಕೋಟೆಗಳ ಪ್ರತಿ ಅಧ್ಯಯನದಲ್ಲಿಯೂ ಅಧಿಕೃತ ಭೂಮಿಕೆಯಾಗಿ

ನಿಲ್ಲುತ್ತದೆ. ಆದರೂ ಸಂದರ್ಭಕ್ಕನುಸಾರವಾಗಿ ಸಮಕಾಲೀನ ಸಾಹಿತ್ಯ ಸ್ಥಳೀಯರ ಅಭಿಪ್ರಾಯಗಳು ಪೌರಾಣಿಕ ಕಥೆಗಳನ್ನು ಇಲ್ಲಿ ಉಪಯೋಗಿಸಿಕೊಳ್ಳಲಾಗಿದೆ.

ಕೋಟೆ ಎಂದರೆ; ಆವರಣವಿರುವ ಪ್ರದೇಶ ಎಂದರ್ಥವಿದೆ. ಕೋಟೆ ಅಥವಾ ರಕ್ಷಾವರಣ. ಇದನ್ನು ಸಂಸ್ಕೃತದಲ್ಲಿ "ದುರ್ಗ" ಎಂದು ಕರೆಯುತ್ತಾರೆ. ಆದರೆ, ಸೈನಿಕರುಗಳಿಂದ ಆವರಿಸಲ್ಪಟ್ಟ ರಕ್ಷಿತವಾದ ಮತ್ತು ರಕ್ಷಣೆಗೆ ಮುಡುಪಾಗಿರುವ ಗಟ್ಟಿಯಾದ ಸ್ಥಳವೇ ಕೋಟೆ ಎಂದೆನಿಸಿಕೊಳ್ಳುತ್ತದೆ. ಪ್ರಾಚೀನ ಗ್ರಂಥವಾದ ಋಗ್ವೇದದಲ್ಲಿ ಪುರಗಳ ಉಲ್ಲೇಖವಿದೆ. ಪುರ ಎಂದರೆ ಭದ್ರವಾದಂತಹ ಕೋಟೆಯನ್ನು ಹೊಂದಿರುವ ಪಟ್ಟಣ ಎಂದರ್ಥ.

ಊರುಗಳು ಬೆಳೆದು ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು, ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿಗಳಲ್ಲಿ ಹಾಗೂ ಗಡಿ ಪ್ರದೇಶಗಳಲ್ಲಿ ಬೃಹತ್ ಆಕಾರದ ಕೋಟೆಗಳನ್ನು ಕಟ್ಟಿಸಿದರು. ಹೀಗಾಗಿ ಪ್ರಾಚೀನ ಕಾಲದ ಮಾನವನ ರಕ್ಷಣೆಯ ಕಾರ್ಯದಲ್ಲಿ ಕೋಟೆ ಮಹತ್ತರ ಪಾತ್ರ ವಹಿಸಿದೆ. ಹಿಂದೆ ಯುದ್ಧಗಳು ನಡೆದಾಗ ಹೊರಗಿನ ಆಕ್ರಮಣ ತಡೆಯಲು ಕೋಟೆ ಕಟ್ಟಿಸಿಕೊಳ್ಳುವುದು ಅವಶ್ಯವಾಗಿತ್ತು. ಕೋಟೆಯು ರಾಜಕೀಯವೆಂಬ ದೇಹದ ಪ್ರಮುಖ ಹಾಗೂ ಅನಿವಾರ್ಯವಾದ ಅಂಗವಾಗಿದ್ದಿತು. ಯಾವುದೇ ರಾಜ್ಯದ ರಾಜಧಾನಿಯು ದೇಹದಲ್ಲಿನ ಹೃದಯವಿದ್ದಂತೆ, ರಾಜಧಾನಿಯನ್ನು ವಶಪಡಿಸಿಕೊಂಡರೆ ಸಾಮಾನ್ಯವಾಗಿ ಒಂದು ರಾಜ್ಯವು ತನ್ನ ಅಸ್ಥಿತ್ವವನ್ನೇ ಕಳೆದುಕೊಳ್ಳುತ್ತಿದ್ದಿತು. ಆದುದರಿಂದ ಕೋಟೆ ನಿರ್ಮಾಣವು ರಕ್ಷಣೆಯ ದೃಷ್ಟಿಯಿಂದ ಅತ್ಯವಶ್ಯವಾಗಿತ್ತು.

ಜಿ.ಟಿ.ದಾಟೆ ಅವರ ಪ್ರಕಾರ; (Times of yore the Fortress was capital means if defence) ಪ್ರಾಚೀನ ಕಾಲದಲ್ಲಿ ಈ ಕೋಟೆಗಳು ರಾಜಧಾನಿಯ ರಕ್ಷಣೆಯ ಸಲುವಾಗಿ ಇರುವಂತಹವು.[4] ಯಕ್ಟರ್ ಸ್ಟೇಟ್ ಅವರ ಪ್ರಕಾರ; Treatise on Fortification and artillery observes forts are equally useful in offensive as defensive warfare) ವಿರೋಧಿಗಳಂದ ಯುದ್ಧ ತಡೆವುದಕ್ಕಾಗಿ ಮತ್ತು ರಕ್ಷಣೆಗಾಗಿ ಕೋಟೆಗಳು ತುಂಬಾ ಅನುಕೂಲಕರವಾಗಿದ್ದವು.[5] ಜಗತ್ತಿನ ಇತಿಹಾಸದಲ್ಲಿ ಕೋಟೆಗಳ ರಚನೆಯ ಇತಿಹಾಸವು ಬಹುಸ್ವಾರಸ್ಯಕರವಾಗಿಯೇ ಮೂಡಿಬಂದಿದೆ. ಕ್ರಿ.ಪೂ. 200ಕ್ಕೆ ಹಿಂದಿನದೆಂದು ಹೇಳಲಾದ ನಿನವ ಮತ್ತು ಬೆಬಿಲೋನಿಯ (ಗ್ರೀಸ್) ರಕ್ಷಣಾ ಗೋಡೆಗಳು 50 ಮೈಲಿ ಸುತ್ತಳತೆಯ 150 ಅಡಿ ಎತ್ತರ 30 ಅಡಿ ದಪ್ಪವಿರುವಂತೆ ನಿನೆವಾದ ಕೋಟೆಗೋಡೆಯ ಮೇಲೆ 1500 ರಕ್ಷಣಾ ಗೋಡೆಗಳದ್ದವೆಂದು ತಿಳಿದುಬರುತ್ತದೆ. ಕ್ರಿ.ಪೂ.221ಕ್ಕೆ ಸೇರಿದ ಚೀನಾದ ಉದ್ದನೆಯ ರಕ್ಷಣಾ ಗೋಡೆಗಳು ಕುರಿತು ತಿಳಿದುಬರುತ್ತದೆ.

ಕೋಟೆಗಳ ಮಹತ್ವದ ಕುರಿತು ಪ್ರಾಚೀನ ಕೃತಿಗಳಾದ ಕೌಟಿಲ್ಯನ "ಅರ್ಥಶಾಸ್ತ್ರ", ಕಾಮಂಡಕನ ನೀತಿಸಾರ, ಶುಕ್ರನ ಶುಕ್ರನೀತಿ, ಮೂರನೆಯ ಸೋಮೇಶ್ವರನ "ಮಾನಸೋಲ್ಲಾಸ"ಗಳಲ್ಲಿ ಈ ಕೋಟೆಗಳ ಮಹತ್ವವನ್ನು ತಿಳಿಸಲಾಗಿರುತ್ತದೆ. ರಾಜನು ತನ್ನ ರಾಣಿಯ ತನ್ನ ಜನರ ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ಗೋಡೆ ಮತ್ತು ಬಾಗಿಲುಗಳುಳ್ಳ ಕೋಟೆಯನ್ನು ಅವಶ್ಯಕವಾಗಿ ಕಟ್ಟಲೇಬೇಕೆಂದು ರಾಜನೀತಿ ಪ್ರಕಾರದಲ್ಲಿ ಬೃಹಸ್ಪತಿಯ ವಚನ ತಿಳಿಸುತ್ತದೆ.[6]

ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ರಾಜನು ತನ್ನ ರಾಜ್ಯದ ಗಡಿಯ ನಾಲ್ಕು ದಿಕ್ಕುಗಳಲ್ಲಿ ಶತ್ರುಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಗಳನ್ನು ಕಟ್ಟಬೇಕೆಂದು ತಿಳಿಸಿದ್ದಾರೆ.[6] ಒಬ್ಬ ಬಿಲ್ಲುಗಾರ ಕೋಟೆ ಗೋಡೆಯ ಮಜಿ (ರಕ್ಷಣೆ)ಯಲ್ಲಿ ನೂರಾರು ಶತ್ರುಗಳೊಂದಿಗೆ ಹೋರಾಡಬಹುದು ಮತ್ತು ನೂರಾರು ಬಿಲ್ಗಾರರು ಹತ್ತು ಸಾವಿರ ಶತ್ರುಗಳೊಂದಿಗೆ ಹೋರಾಡಬಹುದು ಎಂದು ಹೇಳುತ್ತಾ ಮನು ಕೋಟೆಗಳನ್ನು ಕಟ್ಟುವುದನ್ನು ಸಮರ್ಥಿಸಿದ್ದಾರೆ. ಸಾವಿರಾರು ಆನೆಗಳಿಂದ ಮತ್ತು ಲಕ್ಷಾಂತರ ಕುದುರೆಗಳಿಂದ ಯುದ್ಧದಲ್ಲಿ ನಿರ್ವಹಿಸಲಾಗದ ಕಾರ್ಯವನ್ನು ಒಬ್ಬ ರಾಜ ಕೋಟೆಯ ಸಹಾಯದಿಂದ ಆಶ್ಚರ್ಯಕರವಾಗಿ ನಿರ್ವಹಿಸಬಲ್ಲನು ಎಂದು ಪಂಚತಂತ್ರದಲ್ಲಿ ದೃಢವಾಗಿ ಹೇಳಲ್ಪಟ್ಟಿದೆ. ಕೋಟೆಗಳು ಯಾವ ಯಾವ ರೀತಿ ರಚಿತವಾಗುತ್ತಿದ್ದವು ಹಾಗೂ ಅವುಗಳ ರಚನೆಯ ವಿನ್ಯಾಸವೇನೆಂಬುದನ್ನು ತಿಳಿಯಬೇಕಾದರೆ ನಾವು ಸಾಹಿತ್ಯ ಹಾಗೂ ಶಾಸನಗಳ ಮೊರೆ ಹೋಗಬೇಕಾಗುತ್ತದೆ.

ಪ್ರಾಚೀನ ವಾಸ್ತು ಗ್ರಂಥಗಳಾದ ಮಾನಸಾರ, ಮಾಯವತ, ವಿಶ್ವಕರ್ಮ, ವಾಸ್ತು ಹಾಗೂ ಶಿಲ್ಪರತ್ನ ಪುರಾಣಗಳಾದ ಮತ್ಸಪುರಾಣ, ಮಾರ್ಕಂಡೇಯ ಪುರಾಣ, ವಿಷ್ಣುಪುರಾಣ, ರಾಜನೀತಿ ಸಾಹಿತ್ಯ ಕೃತಿಗಳಾದ, ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ, ಶುಕ್ರ ನೀತಿಸಾರ, ಬೃಹತ್ ಸಂಹಿತಾ ಇತ್ಯಾದಿಗಳು ಕೋಟೆಗಳ ವರ್ಗೀಕರಣವನ್ನು ತಿಳಿಸುತ್ತದೆ. ಈ ವರ್ಗೀಕರಣದಲ್ಲಿ ಕೋಟೆಯ ಸ್ಥಳ ಆಕಾರ ಮತ್ತು ರಚನೆಗೆ ಉಪಯೋಗಿಸುವ ವಸ್ತುಗಳನ್ನು ಆಧಾರವಾಗಿರಿಸಿಕೊಂಡಿದೆ. ಕೋಟೆಯಲ್ಲಿ ಎರಡು ವಿಧಗಳಿವೆ. ಒಂದು ಶಾಶ್ವತವಾದಂತಹ ಕೋಟೇಗಳು ಇಲ್ಲಿ ಜನರ ರಕ್ಷಣೆಗೆ ಮುಖ್ಯ ಆದ್ಯತೆ. ಎರಡನೆಯದು ರಣರಂಗದ ಕೋಟೆ. ಇದು ಸೈನ್ಯವನ್ನು ವಶಪಡಿಸಿಕೊಳ್ಳುವುದು ಮತ್ತು ಯುದ್ಧ ಸ್ಥಳವನ್ನು ರಕ್ಷಿಸುವುದು, ಕೊತ್ತಲಗಳು ಎಂದರೆ ಕೋಟೆಯ ಮೇಲ್ಭಾಗ, ಕೋಟೆಯ ಮೇಲಿನ ಸೈನಿಕರು ನಿಂತು ಕಾಯುವ ಎತ್ತರ ಪ್ರದೇಶವೆಂದು ಅರ್ಥ ಕೊಡುತ್ತದೆ. ಕೊತ್ತಲಕ್ಕೆ ಬುರುಜ ಕೊತ್ತಲ, ಕೊತ್ತಲ ಮತ್ತು ಕಾವಲು ಗೋಪುರವೆಂತಲೂ ಕರೆಯುತ್ತಾರೆ.ಕೋಟೆ ಪದದೊಂದಿಗೆ ಕೊತ್ತಲವು ಸೇರಿಕೊಂಡಿದೆ. ಆದರೆ ಮೈಸೂರು ಅರಮನೆಯ ಕೋಟೆಯ ಬಗೆಗೆ ನೋಡುವುದಾದರೆ; ಸರಿ ಸುಮಾರು ೬೦೦ ವರ್ಷದ ಇತಿಹಾಸವಿದೆ. ಕ್ರಿ.ಶ.೧೩೯೯ರಲ್ಲಿ ಯದುರಾಯರು ಸ್ಥಳೀಯ ಮಾರನಾಯಕನನ್ನು ಕೊಂದು ಅಂದಿನ ದೊರೆಯಾಗಿದ್ದ ಚಾಮರಾಜನ ಪುತ್ರಿಯನ್ನು ಮದುವೆಯಾಗಿ ಯದುವಂಶವನ್ನು ಸ್ಥಾಪಿಸಿದ ಕಾಲಕ್ಕೆ ಒಂದು ಮಣ್ಣಿನ ಕೋಟೆ ಇತ್ತೆಂದು ಪ್ರೊ.ಪಿ.ವಿ.ನಂಜರಾಜ ಅರಸು ಅವರು ವ್ಯಕ್ತಪಡಿಸಿದ್ದಾರೆ.[7]

1524ರ ಆಸುಪಾಸಿನಲ್ಲಿ ಮೈಸೂರಿನಲ್ಲಿದ್ದ ಹಳೇಕೋಟೆಯನ್ನು ದುರಸ್ಥಿಯನ್ನು ಮಾಡಲಾಯಿತು ಅಥವಾ ಅಲ್ಲೊಂದು ಹೊಸ ಕೋಟೆಯನ್ನು ನಿರ್ಮಿಸಲಾಯಿತು ಹಾಗೂ ಈ ಕೋಟೆಗೆ 'ಮಹಿಷೂರು' ಎಂಬ ಹೊಸ ಹೆಸರು ಇಡಲಾಯಿತು. ಕ್ರಮೇಣ ಮಹಿಷೂರ ಬೆಳವಣಿಗೆಯಾಗಿ ಮೈಸೂರು ಆಯಿತೆಂದು ಕೋಟೆ ಮತ್ತು ಊರನ್ನು ಮೈಸೂರು ಎಂದೇ ಕರೆಯಲಾಗುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.[8] ಪ್ರಸಿದ್ಧ ಬ್ರಿಟಿಷ್ ಇತಿಹಾಸಕಾರ ಲೆವಿಸ್ ರೈಸ್ ಅವರದೂ ಕೂಡ ಇದೇ ಅಭಿಪ್ರಾಯವಾಗಿದೆ. ಜೊತೆಗೆ ಅವರು ಇನ್ನು ಒಂದು ಮಾತು ಹೇಳುತ್ತಾರೆ. ಮೈಸೂರು (ಮಹಿಷನ ಊರು ಮಹಿಷೂರು) ಎಂಬ ಹೆಸರು ಯಾವ ಕಾಲದಿಂದ ಪ್ರಚಲಿತವಿತ್ತು ಎಂದು ನಿಖರವಾಗಿ ತಿಳಿಯುವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡ ಕ್ರಿಸ್ತಪೂರ್ವದಲ್ಲಿಯೇ ಈ ಹೆಸರು ಪ್ರಚಲಿತದಲ್ಲಿತ್ತೆಂದು ತಿಳಿದುಬಂದಿದೆ.[9]

ಕ್ರಿ.ಶ.10ನೇ ಶತಮಾನದಲ್ಲಿ ಮೈಸೂರು ನಾಡು ಮೈಸೂರು 70 ಎಂದು ಚಾಮುಂಡಿಬೆಟ್ಟದ ಮಹಾಬಲತೀರ್ಥದ ಕ್ರಿ.ಶ.950ರ ಶಿಲಾಶಸನವೊಂದು ಉಲ್ಲೇಖಿಸುತ್ತದೆ. ಕ್ರಿ.ಶ.1128ರ ಶಾಸನವು ಚಾಮುಂಡಿಬೆಟ್ಟದ ಮಹಾಬಲ ಬೆಟ್ಟದ ತೀರ್ಥಕ್ಕೆ ಹೊಯ್ಸಳ ಅರಸು ವಿಷ್ಣುವರ್ಧನನು ದಾನ ಕೊಟ್ಟ ವಿಚಾರ ತಿಳಿದುಬರುತ್ತದೆ.

ದಳವಾಯಿಯನ್ನು, ಮಾರನಾಯಕನನ್ನು, ಸೋಲಿಸಿ ರಾಜಕುಮಾರಿಯನ್ನು ಮದುವೆಯಾಗಿ ಕ್ರಿ.ಶ.1399 ರಿಂದ ಯದುವಂಶ ಒಡೆಯರ್ ಎಂಬ ಹೆಸರಿನಿಂದ ಮೈಸೂರನ್ನು ಆಳಲು ಆರಂಭಿಸಿದರು. ಒಡೆಯರ್ ಮನೆತನ ಆರಂಭವಾಯಿತು. ಹೀಗೆ, 25 ರಾಜರು ಮೈಸೂರನ್ನು ಆಳಿದರು. ಹೀಗೆ ಒಡೆಯರ್ ಆಳ್ವಿಕೆ ನಡೆಸಿದ್ದಾರೆ. ಯದುರಾಯ (ಯದುರಾಜ) ಕ್ರಿ.ಶ.1399 ರಿಂದ ಹಿಡಿದು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಕ್ರಿ.ಶ.1940–50ರವರೆಗೆ ಅದರ ಮಧ್ಯದಲ್ಲಿ 1761–1799 ರವರೆಗೆ ಮಾತ್ರ ಹೈದರ್, ಟಿಪ್ಪು ಸುಲ್ತಾನ್ ಆಡಳಿತಕ್ಕೆ ಮೈಸೂರು ಸೇರಿತ್ತು.

ಮೈಸೂರು ಅರಮನೆಯ ಕೋಟೆಯ ಕುರಿತು ಹೇಳುವುದಾದರೆ; ಬೆಟ್ಟದ ಚಾಮರಾಜ ಒಡೆಯರಿಂದ (1423–59). ಈ ಕೋಟೆ ಪ್ರಾರಂಭವಾಗಿದ್ದು, ಮೂರನೆಯ ಚಾಮರಾಜನಿಂದ (ಕ್ರಿ.ಶ.1513–53) ಭದ್ರವಾಯಿತು. ಅಲ್ಲದೆ ವಿಸ್ತರಣೆಯೂ ಸಹ ಆಯಿತು. ತದನಂತರ 1799ರಲ್ಲಿ ದಿವಾನ್ ಪೂರ್ಣಯ್ಯ ಕಾಲಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲವಾಗಿದೆ. (1799–1837) ಈ ಕೋಟೆಯನ್ನು ದುರಸ್ತಿಗೊಳಿಸಿದನು.

ಅರಮನೆಯ ಸುತ್ತ ಕೋಟೆಗಳಿದ್ದು, ಈ ಕೋಟೆಯನ್ನು ಜಯಮಾರ್ತಾಂಡ ಬಾಗಿಲು, ವರಾಹಬಾಗಿಲು, ಅಂಬಾವಿಲಾಸ ಬಾಗಿಲು, ಬ್ರಹ್ಮಪುರಿಬಾಗಿಲು ಹಾಗೂ ಬಲರಾಮ ಬಾಗಿಲು, ಜಯರಾಮ ಬಾಗಿಲು ಎಂದು ಕರೆಯುವ ವಾಡಿಕೆ ಇದೆ.

1799ರ ಕಾಲಕ್ಕೆ ಕೋಟೆಯ ಒಳಗಿನ ಜನಸಾಮಾನ್ಯರ ಮನೆಗಳನ್ನು ಕೆಡವಿ ಕೇವಲ ಅರಮನೆ ಹಾಗೂ ದೇವಾಲಯಗಳಿಗೆ ಇರುವುದಕ್ಕೆ ಸೀಮಿತವಾಯಿತು. ಹಳೆಯ ಅರಮನೆಯೂ 1799ರಲ್ಲಿ

ಹಾಗೂ 1801ರ ಮಧ್ಯದಲ್ಲಿ ಎರಡು ವರ್ಷದಲ್ಲಿ ಅರಮನೆಯ ನಿರ್ಮಾಣವಾಗಿದೆ. 1803ರಲ್ಲಿ ಮೈಸೂರಿಗೆ ಬಂದಿದ್ದ ಲಾರ್ಡ್ ವ್ಯಾಲೆಷಿಯಾ ಅವರು ಅರಮನೆ ಕುರಿತು ವ್ಯಕ್ತಪಡಿಸಿದ್ದಾರೆ.[10]

1902ರಲ್ಲಿ ಹೇನ್ರಿ ಇರ್ವಿನ್ ಎಂಬಾತನು ಹೊಸ ಅರಮನೆಯನ್ನು ಇಂಡೋ ಸಾರ್ಸೆನಿಕ್ ಎಂಬ ಶೈಲಿಯಲ್ಲಿ ನಿರ್ಮಿಸಿದ್ದಾರೆ. ಪ್ರಸ್ತುತ ಸುಸ್ಥಿತಿಯಲ್ಲಿದೆ. ಈ ಕೋಟೆಯು ಆಧುನಿಕ ಯುಗದ ಅಷ್ಟೇನೂ ರಕ್ಷಣಾ ಅಂಶಗಳಿಲ್ಲದ ಸರಳ ಸಾಧಾರಣ ಕೋಟೆ ಎನ್ನಬಹುದು.

**ಕೊನೆಟಿಪ್ಪಣಿಗಳು**


1. ಸೂರ್ಯನಾಥ್ ಯು. ಕಾಮತ್ (ಸಂ) – ಕರ್ನಾಟಕ ರಾಜ್ಯ ಗ್ಯಾಸೆಟಿಯರ್, 1984, ಸಂಪುಟ–3, ಪು.ಸಂ.486, ಬೆಂಗಳೂರು ಸರ್ಕಾರಿ ಮುದ್ರಣಾಲಯ, 1984.
2. ಡಾ.ಎಂ.ಎನ್.ಕೃಷ್ಣಮೂರ್ತಿ – ನಿವೃತ್ತ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ರವರಿಂದ ಮಾಹಿತಿ ಪಡೆಯಲಾಗಿದೆ.
3. ಚನ್ನಬಸಪ್ಪ ಎನ್. ಪಾಟೀಲ್ – ಕರ್ನಾಟಕ ಕೋಟೆಗಳು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1999, ಪು.ಸಂ.40.
4. Date G.T. Art of War in Ancient India, London, 1929, Pg No.487.
5. Straith H. – Treatise on Fortification and Artillery, Pg No.42.
6. Rangarajan L.N. (Ed.) – 1986 Koutilya Arthashastra, Pg No.3, 4.
7. ಪ್ರೊ.ಪಿ.ವಿ.ನಂಜರಾಜ ಅರಸು – ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ಅಭಿರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು, 2007, ಪು.ಸಂ.77.
8. ಪ್ರೊ.ಪಿ.ವಿ.ನಂಜರಾಜ ಅರಸು – ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ಅಭಿರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು, 2007, ಪು.ಸಂ.77.
9. ಈ.ಜಿ.ಮಂಜುನಾಥನ್ – ಮೈಸೂರು ಜಿಲ್ಲೆ ಒಂದು ನೋಟ, ಅಂಬಾರಿ, 9ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಪುಟ, 2008.
10. ಪ್ರೊ.ಪಿ.ವಿ.ನಂಜರಾಜ ಅರಸು – ಪೂರ್ವೋಕ್ತ, ಪು.ಸಂ.38.